# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ಉಪವಿಭಾಗ, 7ನೇ ಮಹಡಿ,**
**ಪಿ.ಯು.ಕಟ್ಟಡ, ಎಂ.ಜಿ.ರಸ್ತೆ, ಮೇಯೋಹಾಲ್, ಬಿ.ಬಿ.ಎಂ.ಪಿ. ಬೆಂಗಳೂರು-560001**

ಸಂಖ್ಯೆ : ಸ.ಕಾ.ಅ/ಶಾಂ.ಉವಿ/ಪಿಆರ್/69/2022-23 ದಿನಾಂಕ :06-08-2022

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಂತಿನಗರ ವಿಭಾಗ, ಪೂರ್ವ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ : 116 ನೀಲಸಂದ್ರದ ವಾರ್ಡ್ ಸಮಿತಿ ಸಭೆಯನ್ನು ಕ್ಯಾನೋಪಿ ರೆಸ್ಟೋರೆಂಟ್, ಪಿ.ಯು.ಬಿ ಬಿಲ್ಡಿಂಗ್, ಎಂ.ಜಿ ರಸ್ತೆ, ಬೆಂಗಳೂರು. ದಿನಾಂಕ:06-08-2022 ರಂದು ಮಧ್ಯಾಹ್ನಾ 12:00 ಗಂಟೆಗೆ ಸಭೆಯಲ್ಲಿ ಚರ್ಚಿಸಲಾದ ಸಭೆಯ ನಡವಳಿಗಳು

## ಸಭೆಗೆ ಹಾಜರಿದ್ದ ಸಾರ್ವಜನಿಕರು ಹಾಗೂ ಅಧಿಕಾರಿಗಳು

| ಕ್ರ.ಸಂ | ಸದಸ್ಯರ ಹೆಸರುಗಳು |
|---|---|
| 1 | ಶ್ರೀ ಸಂಗಮಿತ್ರ ನೊಡಲ್ ಅಧಿಕಾರಿ (ನೀಲಸಂದ್ರ-116) ಹಾಗೂ ಉಪ ಆರೋಗ್ಯ ಅಧಿಕಾರಿಗಳು (ಪೂರ್ವ ವಲಯ) |
| 2 | ಶ್ರೀ ಮಧು.ಆರ್ ಕಾರ್ಯಪಾಲಕ ಅಭಿಯಂತರರು, (ಶಾಂತಿನಗರ ವಿಭಾಗ) |
| 3 | ಶ್ರೀ ಹರ್ಷ ಎಸ್. ಕಿರಿಯ ಅಭಿಯಂತರರು (ಕಾರ್ಯದರ್ಶಿ) |
| 4 | ಶ್ರೀ ಸಗಾಯ್‌ರಾಜ್, ಹಿರಿಯ ಆರೋಗ್ಯ ಪರಿವೀಕ್ಷಕರು (ನೀಲಸಂದ್ರ) |
| 5 | ಶ್ರೀ ನೀಲಾಂಜನಪ್ಪಾ, ಕಿರಿಯ ಆರೋಗ್ಯ ಪರಿವೀಕ್ಷಕರ, (ನೀಲಸಂದ್ರ) |
| 6 | ಶ್ರೀ ಬಸವರಾಜು, ಸಹಾಯಕ ಕಂದಾಯ ಅಧಿಕಾರಿ (ಶಾಂತಿನಗರ) |
| 7 | ಶ್ರೀ ಶ್ರೀನಿವಾಸ, ಸಹಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, |
| 8 | ಶ್ರೀ ಶಿವಾನಂದ ನಿಂಬೊ ಕಿರಿಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, |
| 9 | ಶ್ರೀ ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, |
| 10 | ಶ್ರೀ ನವೀನ್ ಕುಮಾರ, ಮಾರ್ಷಲ್ |
| 11 | ಶ್ರೀ ನಾಗೇಂದ್ರ, ಅರಣ್ಯ ಇಲಾಖೆ |
| 12 | ಶ್ರೀ ವಿಕ್ರಾಂತ್, ಸಹಾಯಕ ಅಭಿಯಂತರರು, ಸ್ಟಾಮ್ ವಾಟರ್ ಡ್ರೇನ್ (ಎಸ್.ಡಬ್ಲ್ಯೂ.ಡಿ) |
| 13 | ಶ್ರೀಮತಿ ಸುಮತಿ, ಸಾರ್ವಜನಿಕರು (ನೀಲಸಂದ್ರ) |
| 14 | ಶ್ರೀ ಅಲ್ಪಾಜ್.ಜೆ, ಸಾರ್ವಜನಿಕರು (ನೀಲಸಂದ್ರ) |
| 15 | ಶ್ರೀ ಮಂಜು ವಿ ಆರ್, ಸಾರ್ವಜನಿಕರು (ನೀಲಸಂದ್ರ) |
| 16 | ಶ್ರೀ ಮುರುಗನ್, ಸಾರ್ವಜನಿಕರು (ನೀಲಸಂದ್ರ) |
| 17 | ಶ್ರೀ ಸೈಯದ್ ಇದ್ರೀಸ್, ಸಾರ್ವಜನಿಕರು (ನೀಲಸಂದ್ರ) |

ಸ್ಥಳಿಯ ಶಾಸಕರಾದ ಮಾನ್ಯ ಶ್ರೀ.ಎನ್.ಎ.ಹ್ಯಾರೀಸ್ ರವರ ಅಧ್ಯಕ್ಷತೆಯಲ್ಲಿ ಹಾಗೂ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸುತ್ತಾ ಮುಖ್ಯ ವಿಷಯದ ಬಗ್ಗೆ ಚರ್ಚಿಸಲು ತಿಳಿಸಿದರು.

Scanned by Scanner Go

| ಕ್ರ.ಸಂ | ಮಾಹಿತಿ | ಕ್ರಮವಹಿಸಬೇಕಾದ ಅಧಿಕಾರಿಗಳು |
|---|---|---|
| | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP)** | |
| 1 | **ಕಾಮಗಾರಿ ಇಲಾಖೆ (Engineering Department)** | |
| | ✚ **ಶ್ರೀ.ಮಂಜು ವಿ ಆರ್** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಎಲ್.ಆರ್.ನಗರ ಹಾಗೂ ಅಂಬೇಡ್ಕರ್ ನಗರಗಳಲ್ಲಿನ ರಸ್ತೆ ಗುಂಡಿಗಳನ್ನು ಈ ಕೂಡಲೇ ಸರಿಪಡಿಸಲು ಕೋರಿದರು.<br>✚ **ಶ್ರೀ.ಸೈಯದ್ ಇದ್ರೀಸ್** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಮುನೇಗೌಡ ಗಾರ್ಡನ್ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಗಳಿನ ರಸ್ತೆಯ ಗುಂಡಿಗಳನ್ನು ಸರಿಪಡಿಸಲು ಕೋರಿದರು.<br>✚ **ಶ್ರೀಮತಿ ಸುಮತಿ** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಮುನೇಶ್ವರ ದೇವಸ್ಥಾನ ಮುಂಭಾಗದ ಸ್ಯಾನಿಟರಿ ಪೈಪ್ ಲೈನ್ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದರು | ಸಹಾಯಕ ಅಭಿಯಂತರರು, ನೀಲಸಂದ್ರ |
| 2 | **ಪೊಲೀಸ್ ಇಲಾಖೆ (ಸಂಚಾರ ಮತ್ತು ಕಾ&ಸು) (Traffic Police, Law & Order)** | |
| | ✚ **ಶ್ರೀ.ಮಂಜು ವಿ ಆರ್** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಎಲ್.ಆರ್.ನಗರ ಹಾಗೂ ಅಂಬೇಡ್ಕರ್ ನಗರಗಳಲ್ಲಿನ ಸಿ.ಸಿ ಕ್ಯಾಮರಾಗಳು ಕಾರ್ಯನಿರ್ವಹಿಸುತ್ತಿಲ್ಲ, ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು.<br>✚ **ಶ್ರೀ. ಸೈಯದ್ ಇದ್ರೀಸ್** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಮುನೇಗೌಡ ಗಾರ್ಡನ್ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಸಿ.ಸಿ ಕ್ಯಾಮರಾಗಳು ಅಳವಡಿಸುವಂತೆ ಕೋರಿರುತ್ತಾರೆ.<br>✚ **ಸಾರ್ವಜನೀಕರು:**–ಎಲ್.ಆರ್.ನಗರ ಅನಧಿಕೃತ ಚಟುವಟಿಕೆಗಳು ನಡೆಯುತ್ತಿದ್ದು, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿದರು. | Ashoknagar/Adugodi Traffic Police , Law& Order Department |
| 3 | **ಘನತ್ಯಾಜ್ಯ ನಿರ್ವಹಣೆ ಶಾಂತಿನಗರ (SWM)** | |
| | ✚ ಶ್ರೀ.ಮಂಜು.ವಿ.ಆರ್.ಸಾರ್ವಜನಿಕ (ನೀಲಸಂದ್ರ) ರವರು ಪತ್ರದಲ್ಲಿ:- ಎಲ್.ಆರ್.ನಗರ, ಸ್ಲಂಮ್ ಬೋರ್ಡ್, ಪಂಪ್ ಹೌಸ್ ರೋಡ್‌ಗಳಲ್ಲಿ ಹೆಚ್ಚಿನ ತ್ಯಾಜ್ಯ ಸಂಗ್ರಹಣೆಯಾಗಿದ್ದು, ಅದನ್ನು ತೆರವುಗೊಳಿಸಲು ಕೋರಿದರು.<br>✚ **ಶ್ರೀಮತಿ ಸುಮತಿ** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ –ನೀಲಸಂದ್ರ ಮುಖ್ಯ ರಸ್ತೆಗಳಲ್ಲಿ ದನದ ಮಾಂಸವನ್ನು ಮಾರಾಟ ಮಾಡುತ್ತಿದ್ದು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿದರು | ಸಹಾಯಕ ಕಾರ್ಯಪಾಲಕ ಅಭಿಯಂತರರು (SWM) |
| 4 | **ವಿದ್ಯುತ್ ಇಲಾಖೆ (ELECTRICAL DEPARTMENT)** | |
| | ✚ ಶ್ರೀ.ಮಂಜು.ವಿ.ಆರ್.ಸಾರ್ವಜನಿಕ (ನೀಲಸಂದ್ರ) ರವರು ಪತ್ರದಲ್ಲಿ:- ಎಲ್.ಆರ್.ನಗರದ, 14ನೇ ಅಡ್ಡ ರಸ್ತೆಯಲ್ಲಿನ ವಿದ್ಯುತ್ ದೀಪ ಕಂಬವೊಂದು ಬೀಳುವ ಸ್ಥಿತಿಯಲಿದ್ದು ಇದರ ಬಗ್ಗೆ ಈ ಕೂಡಲೇ ಸೂಕ್ತ ಕ್ರಮವಹಿಸಲು ಕೋರಿದರು.<br>✚ ಶ್ರೀ.ಮಂಜು.ವಿ.ಆರ್.ಸಾರ್ವಜನಿಕ (ನೀಲಸಂದ್ರ) ರವರು ಪತ್ರದಲ್ಲಿ:- ಎಲ್.ಆರ್.ನಗರ ಮುಖ್ಯ ರಸ್ತೆ, ಇಂದಿರ ಕ್ಯಾಂಟಿನ್ ಬಳಿಯ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿಲ್ಲ ಇದರ ಬಗ್ಗೆ ಸೂಕ್ತ | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಇಲಾಖೆ |

Scanned by Scanner Go

| | | |
|---|---|---|
| | ಕ್ರಮಕೈಗೊಳ್ಳಲು ಕೋರಿದರು.<br>**ಶ್ರೀ ಮುರುಗನ್** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಬೆಸ್ಕಾಂ ಅಧಿಕಾರಿಗಳು ಮಾಸಿಕ ಬಾಕಿ ಪಾವತಿಸದ ಕಾರಣ, ಸ್ಥಳೀಯ ಮನೆಯವರಿಗೆ ಯಾವುದೇ ಮಾಹಿತಿ ಕೊಡದೆ ವಿದ್ಯುತ್ ಮೀಟರ್‌ಗಳನ್ನು ತೆಗೆದುಕೊಂಡುಹೋಗಿರುತ್ತಾರೆ ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು.<br>**ಶ್ರೀ.ಸೈಯದ್ ಇದ್ರೀಸ್** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಮುನೇಗೌಡ ಗಾರ್ಡನ್ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವಂತೆ ಕೋರಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಇಲಾಖೆ |
| 5 | **ಬೃಹತ್ ನೀರುಗಾಲುವೆ (SWD DEPARTMENT)** | |
| | **ಶ್ರೀ.ಮಂಜು.ವಿ.ಆರ್** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಅಂಬೇಡ್ಕರ್ ನಗರ, 10ನೇ ಅಡ್ಡ ರಸ್ತೆಯಲ್ಲಿನ ಚರಂಡಿಗಳಲ್ಲಿ ಹೂಳನ್ನು ತೆರವುಗೊಳಿಸಲು ಕೋರಿದರು.<br>**ಶ್ರೀ.ಸೈಯದ್ ಇದ್ರೀಸ್** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಮುನೇಗೌಡ ಗಾರ್ಡನ್ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಗಳಿನ ರಸ್ತೆಯ ಮ್ಯಾನ್‌ಹೋಲ್‌ಗಳಲ್ಲಿ ಹೂಳನ್ನು ತೆರವುಗೊಳಿಸಲ ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) |
| 6 | **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB DEPARTMENT)** | |
| | **ಶ್ರೀ.ಸೈಯದ್ ಇದ್ರೀಸ್** (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಮುನೇಗೌಡ ಗಾರ್ಡನ್ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಮಳೆ ಹೆಚ್ಚಾದಾಗ ಚರಂಡಿಗಳಲ್ಲಿ ನೀರು ಸರಗಾವಾಗಿ ಹರಿಯದೇ ರಸ್ತೆಮೇಲೆ ಹಾಗೂ ಸ್ಥಳೀಯ ಮನೆಗಳಿಗೆ ನೀರು ನುಗುತ್ತಿದ್ದು ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು BWSSB |

ಅಂತಿಮವಾಗಿ ಅಧ್ಯಕ್ಷಕರು ಮಾತನಾಡುತ್ತಾ ಮೇಲೆ ತಿಳಿಸಿರುವಂತೆ ಎಲ್ಲಾ ಅಧಿಕಾರಿಗಳು ಕೆಲಸ ನಿರ್ವಹಿಸಲು ಕೋರುತ್ತಾ, ಮುಂದಿನ ಸಭೇಯಷ್ಟರಲ್ಲಿ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಗಣಿಸಿ ತಿಳಿಸಲು ಕೋರಿದೆ ಹಾಗೂ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು, ಮುಂದಿನ ಸಭೆಯಲ್ಲಿ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಿತಿಯ ಸಾರ್ವಜನಿಕರು ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Sangeetha
6/8/2022

ಸಹಿ
ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ –116 ನೀಲಸಂದ್ರ

ಸಹಿ
ಅಧ್ಯಕ್ಷರು ಮತ್ತು
ನೋಡಲ್ ಅಧಿಕಾರಿ
ವಾರ್ಡ್ –116 ನೀಲಸಂದ್ರ

ಪ್ರತಿಗಳನ್ನು:-

1. ಮಾನ್ಯ ಮುಖ್ಯ ಆಯುಕ್ತರು, ಆಪ್ತ ಸಹಾಯಕರಿಗೆ ಕಳುಹಿಸುತ್ತಾ, ಮಾನ್ಯ ಮುಖ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು, ಪೂರ್ವ ವಲಯವರವ ಅವಗಾಹನೆಗಾಗಿ ಸಲ್ಲಿಸಿದೆ.
4. ವಲಯ ಆಯುಕ್ತರು, ಪೂರ್ವ ವಲಯವರವ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಶಾಂತಿನಗರ) ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಅವಗಾಹನೆಗೆ ಸಲ್ಲಿಸಿದೆ.
7. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಹಾಗೂ ಎಲ್ಲಾ ಸಮಿತಿ ಸದಸ್ಯರಿಗೆ ಸಲ್ಲಿಸಿದೆ.
8. ಕಛೇರಿಯ ಕಡತಕ್ಕೆ.

Scanned by Scanner Go